ಕರ್ನಾಟಕ ಸರಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಜಿಲ್ಲಾ ಪಂಚಾಯತ ಧಾರವಾಡ

# ಮಾತು ಕತೆ

ನಮ್ಮ ನಡೆ ಗ್ರಾಮದ ಕಡೆ...







ಸಂಪುಟ : 01 ಸಂಚಿಕೆ 02 : ಫೆಬ್ರವರಿ 2023

## ಅಂಚಟಗೇರಿ ಗ್ರಾಮ ಪಂಚಾಯತ

ಜಿಲ್ಲೆ : ಧಾರವಾಡ


## ಅಂಚಟಗೇರಿಯ ಮಾತುಕತೆ...




ಪ್ರಪಂಚದಲ್ಲೇ ಅತೀ ದೊಡ್ಡ ಬಡತನ ನಿವಾರಣಾ ಕಾರ್ಯಕ್ರಮವಾಗಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯು ಜಾರಿಗೆ ಬಂದ ಸು ಸಂದರ್ಭವನ್ನು ನೆನಪಿಸುವ ಸಲುವಾಗಿ, ಪ್ರತಿ ವರ್ಷ ಫೆಬ್ರುವರಿ 2 ರಂದು ನರೇಗಾ ದಿವಸವನ್ನು ಆಚರಿಸಲಾಗುತ್ತಿದೆ. ಈ ಯೋಜನೆಯು ಭಾರತ ಸರಕಾರದ ಗೆಜೆಟನಲ್ಲಿ ದಿನಾಂಕ: 07/09/2005 ರಂದು ಪ್ರಕಟಗೊಂಡು, ದಿನಾಂಕ: 02/02/2006 ರಿಂದ ಮೊದಲ ಹಂತದಲ್ಲಿ ದೇಶದ ಅತೀ ಹಿಂದುಳಿದ 200 ಜಿಲ್ಲೆಗಳಲ್ಲಿ ಜಾರಿಗೆ ಬಂದಿತು.

ಗ್ರಾಮೀಣ ಪ್ರದೇಶದ ಪ್ರತಿಯೊಂದು ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಟ 100 ದಿನಗಳ ಅಕುಶಲ ಕೂಲಿಯನ್ನು ಅವರ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿಯೇ ಪಡೆಯುವದು, ಈ ಯೋಜನೆಯ ಮುಖೇನ ದೊರೆತ ಹಕ್ಕಾಗಿರುವದರಿಂದ, ನಿರುದ್ಯೋಗ ನಿವಾರಣೆಯಾಗಿ, ಕುಟುಂಬದ ವರಮಾನ ಹೆಚ್ಚಾಗುತ್ತದೆ ಮಾತ್ರವಲ್ಲ, ಗ್ರಾಮದಲ್ಲಿ ಆಸ್ತಿ ಸೃಜನೆ ಕೂಡಾ ಆಗಿ ಪರಿಸರದ ಮೇಲೆ ದೂರಗಾಮಿ ಧನಾತ್ಮಕ ಪರಿಣಾಮವನ್ನು ಉಂಟು ಮಾಡುತ್ತದೆ. ಗ್ರಾಮೀಣ ಜನರು ಉದ್ಯೋಗ ಅರಸಿ ವಲಸೆ ಹೋಗುವದನ್ನು ತಡೆಯುತ್ತದೆ. ಯೋಜನೆಯಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸಮಾನ ಕೂಲಿಯ ಕಾರಣದಿಂದ ಪರಂಪರಾಗತ ಲಿಂಗ ತಾರತಮ್ಯವನ್ನು ಇದು ತಡೆದಿದೆ. ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯತಿಗಳನ್ನು ಈ ಯೋಜನೆಯು ಸಶಕ್ತಗೊಳಿಸಿದೆ. ಅಂಚಟಗೇರಿ ಗ್ರಾಮ ಪಂಚಾಯತಿಯ ವಿಷಯಗಳನ್ನೊಳಗೊಂಡ ಮಾತುಕತೆ ಮಾಸ ಪತ್ರಿಕೆಯ ಮೂಲಕ ನರೇಗಾ ದಿನಾಚರಣೆಯ ಶುಭಾಶಯಗಳನ್ನು ಕೋರುತ್ತೇನೆ.

**ಡಾ|| ಸುರೇಶ ಇಟ್ನಾಳ** ಐಎಎಸ್
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಧಾರವಾಡ

## ಗ್ರಾಮೀಣ ಕ್ರೀಡೆಗಳಿಗೆ ಉತ್ತೇಜನ...



ಗ್ರಾಮ ಪಂಚಾಯತಿಗಳು ಸರ್ಕಾರದ ಸೇವೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ಒದಗಿಸುವಲ್ಲಿ ಬೆನ್ನೆಲುಬು ಆಗಿ ಕಾರ್ಯನಿರ್ವಹಿಸುತ್ತಿವೆ. ಅಂಚಟಗೇರಿಯ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಕ್ಕಳು ಮತ್ತು ಯುವಕರನ್ನು ಸ್ಪರ್ಧಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ತೊಡಗಿಸಿ ಕೊಳ್ಳುವ ಉದ್ದೇಶದಿಂದ ಗ್ರಾಮೀಣ ಕ್ರೀಡಾಕೂಟಕ್ಕೆ ಒತ್ತು ನೀಡಲಾಗಿದೆ. ಜನೇವರಿ 26 2023 ರ 74ನೇ ಗಣರಾಜ್ಯೋತ್ಸವದ ಅಂಗವಾಗಿ ಹುಬ್ಬಳ್ಳಿ ಗ್ರಾಮೀಣ ವಲಯ ಮಟ್ಟದ ಕ್ರೀಡಾಕೂಟಗಳನ್ನು, ಸಾಂಸ್ಕೃತಿಕ ಚಟುವಟಿಕೆಗಳನ್ನು ಆಯೋಜಿಸಿ ಮಕ್ಕಳ ಪ್ರತಿಭಾ ಪ್ರದರ್ಶನಕ್ಕೆ ಒತ್ತು ನೀಡಿ, ಸ್ಪರ್ಧಾ ಮನೋಭಾವ ಹೆಚ್ಚಿಸುವುದರೊಂದಿಗೆ, ಗಣರಾಜ್ಯೋತ್ಸವಕ್ಕೆ ಹೊಸ ಮೆರಗು ತರಲಾಯಿತು.

**ಶ್ರೀಮತಿ ಫರೀದಾ ಶಿರಿಗೇರಿ**
ಪಂಚಾಯತ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯತ, ಅಂಚಟಗೇರಿ



ಮಾತು ಕತೆ
ನಮ್ಮ ನಡೆ ಗ್ರಾಮದ ಕಡೆ...



## ನಮ್ಮ ಗ್ರಾಮಗಳ ಹಿನ್ನೆಲೆ ಮತ್ತು ಮುನ್ನೆಲೆ...



ನಮ್ಮ ಗ್ರಾಮ ಪಂಚಾಯತಿಯು ಎರಡು ಗ್ರಾಮಗಳನ್ನು ಹೊಂದಿದ್ದು, ಅವುಗಳು: ಅಂಚಟಗೇರಿ ಮತ್ತು ಅಗ್ರಹಾರ ತಿಮ್ಮಸಾಗರ. ಹುಬ್ಬಳ್ಳಿ ನಗರದಿಂದ 7 ಕಿಮೀ ದೂರದಲ್ಲಿರುವ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಾನವಾದ ಅಂಚಟಗೇರಿ ಗ್ರಾಮವು ಬ್ರಿಟಿಷ್ ಆಡಳಿತದ ಕಾಲದಲ್ಲಿ ಹುಬ್ಬಳ್ಳಿ ಮತ್ತು ಮಿಶ್ರಿಕೋಟಿಯ ಅಂಚೆ ಪತ್ರಗಳ ವ್ಯವಹಾರದ ಕೇಂದ್ರವಾಗಿತ್ತು. ಕೇರಿ ಎಂದರೆ ಸಣ್ಣ ಗ್ರಾಮ. ಅಂಚೆಯ ಕೇರಿ ಬರಬರುತ್ತ ಅಂಚಟಗೇರಿ ಅಂತಾ ರೂಪಾಂತರ ಹೊಂದಿದೆ. ಅಗ್ರಹಾರ ತಿಮ್ಮಸಾಗರವು ಚಿಕ್ಕ ಗ್ರಾಮವಾಗಿದ್ದು, ಗ್ರಾಮ ಪಂಚಾಯತಿಯಿಂದ 5 ಕಿಮೀ ದೂರದಲ್ಲಿದೆ. ಅಗ್ರಹಾರ ಎಂದರೆ ಬ್ರಾಹ್ಮಣರಿಗೆ ದತ್ತಿ ಕೊಟ್ಟ ಗ್ರಾಮವೆಂದರ್ಥ. ಈ ಗ್ರಾಮದಲ್ಲಿ ತಿಮ್ಮನ ಹೆಸರಿನ ಕೆರೆಯಿದ್ದದ್ದರಿಂದ ಈ ಗ್ರಾಮಕ್ಕೆ ಅಗ್ರಹಾರ ತಿಮ್ಮಸಾಗರ ಎಂದು ಅನ್ವರ್ಥಕವಾಗಿ ಬಂದಿದೆ.

ವಾಣಿಜ್ಯ ನಗರಿ ಹುಬ್ಬಳ್ಳಿಯ ಸಮೀಪವಿರುವ ನಮ್ಮ ಗ್ರಾಮ ಪಂಚಾಯತಿಯನ್ನು ಮಾದರಿ ಗ್ರಾಮ ಪಂಚಾಯತಿಯನ್ನಾಗಿ ಮಾಡಿ ನಗರ ಪ್ರದೇಶದ ಎಲ್ಲಾ ಸೌಲಭ್ಯಗಳೂ ನಮ್ಮ ಗ್ರಾಮ ವಾಸಿಗಳಿಗೆ ಲಭ್ಯವಾಗುವಂತೆ ಮಾಡುವದು ನಮ್ಮ ಗುರಿಯಾಗಿದೆ.

**ಶ್ರೀಮತಿ ನೀಲವ್ವ ತಿಪ್ಪಣ್ಣ ಮೊಕಾಶಿ**
ಅಧ್ಯಕ್ಷರು, ಗ್ರಾಮ ಪಂಚಾಯತ್ ಅಂಚಟಗೇರಿ

## ಡಿಜಟಲೀಕರಣದತ್ತ ಕೆಲವು ಹೆಜ್ಜೆಗಳು...



Scan & Pay using any Bharat QR / BHIM UPI App
PRESIDENT AND PDO GRA
DHARWAD
TID No. 32388801
BHIM
ಗ್ರಾಮ ಪಂಚಾಯತ ಅಂಚಟಗೇರಿ

ಕರದಾತರು ತಮ್ಮ ವಿವಿಧ ಕರಗಳನ್ನು ಗ್ರಾಮ ಪಂಚಾಯತಿಗೆ QR Code ಮೂಲಕ ಪಾವತಿಸುವ ವ್ಯವಸ್ಥೆ ಮಾಡಿಲಾಗಿದೆ. ಸರಕಾರದ ವಿವಿಧ ಯೋಜನೆಗಳು ಮತ್ತು ಸೇವೆಗಳನ್ನು ಸಾರ್ವಜನಿಕರಿಗೆ ತಲುಪಿಸಲು ಗ್ರಾಮ ಪಂಚಾಯತಿಯಲ್ಲಿ e Wall ಅಳವಡಿಸಲಾಗಿದೆ. ಸಹಾಯವಾಣಿ ಸಂ 9972469347 ಸ್ಥಾಪಿಸಿದ್ದು, ಗ್ರಾಮಸ್ಥರು ತಮ್ಮ ದೂರುಗಳನ್ನು ದಾಖಲಿಸಲು ವ್ಯವಸ್ಥೆ ಮಾಡಿದ್ದು, ಅವರ ದೂರಿಗೆ ಪರಿಹಾರವನ್ನು ಶೀಘ್ರ ನೀಡಲು ಕ್ರಮ ಕೈಕೊಳ್ಳಲಾಗುತ್ತಿದೆ. ಗ್ರಾಮ ಪಂಚಾಯತಿಯ ವೆಬ್ ಸೈಟು www.gpanchatageri.com ರಚಿಸಿದ್ದು, ಗ್ರಾಮ ಪಂಚಾಯತಿ ಮತ್ತು ಸರಕಾರದ ವಿವಿಧ ಮಾಹಿತಿಗಳು ನಾಗರೀಕರಿಗೆ ಲಭ್ಯವಿವೆ.

**ಶ್ರೀ ಬಸವಲಿಂಗಯ್ಯ ಮೂಗನೂರಮಠ**
ಯೋಜನಾ ನಿರ್ದೇಶಕರು, ಜಿಲ್ಲಾ ಪಂಚಾಯತ ಧಾರವಾಡ

## ಗ್ರಾಮೀಣ ಗ್ರಂಥಾಲಯಕ್ಕೆ ಡಿಜಿಟಲ್ ಸ್ಪರ್ಶ...



ಡಿಜಿಟಲ್ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಲ್ಲಿ ಗ್ರಾಮಸ್ಥರು, ವಿದ್ಯಾರ್ಥಿಗಳನ್ನು ಸೇರಿ ಒಟ್ಟು 1679 ಜನ ಸದಸ್ಯತ್ವವನ್ನು ಹೊಂದಿದ್ದಾರೆ. ಗ್ರಾಮದ ಮಕ್ಕಳಲ್ಲಿ ಸ್ಪರ್ಧಾ ಮನೋಭಾವ ಮತ್ತು ಓದಲು ಅಭಿರುಚಿಯನ್ನು ಹೆಚ್ಚಿಸಲು ದಿನ ಪತ್ರಿಕೆ, ನಿಯತ ಕಾಲಿಕೆ, ಕಥೆ, ಕಾದಂಬರಿ, ಸ್ಪರ್ಧಾತ್ಮಕ ಪುಸ್ತಕಗಳು, ಕಂಪ್ಯೂಟರ್, ಟಿ.ವಿ., ಪ್ರೊಜೆಕ್ಟರ್, ನಿರಂತರ ಬೆಳಕಿಗೆ ಸೋಲಾರ ವಿದ್ಯುತ್ ವ್ಯವಸ್ಥೆ, ವೈ-ಫೈ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ಮಕ್ಕಳನ್ನು ಗ್ರಂಥಾಲಯ ಕಡೆಗೆ ಆಕರ್ಷಿಸಲು ಚೆಸ್ ಬೋರ್ಡ, ಕೇರಂ ಬೋರ್ಡ, ಇತರೆ ಆಟದ ಸಾಮಗ್ರಿಗಳು ಗ್ರಂಥಾಲಯದಲ್ಲಿ ಲಭ್ಯವಿವೆ. ಉತ್ತಮ ಚಿತ್ರ ಕಲಾಕೃತಿಗಳನ್ನು ಒಳಗೊಂಡ ಸುಸಜ್ಜಿತ ಗ್ರಂಥಾಲಯ ನಿರ್ಮಿಸಲಾಗಿದೆ. ಓದುಗರನ್ನು ಹಾಗೂ ಮಕ್ಕಳನ್ನು ಈ ಗ್ರಂಥಾಲಯ ಸೂಜಿಗಲ್ಲಿನಂತೆ ತನ್ನತ ಸೆಳೆಯುತ್ತಿದೆ.

**ಶ್ರೀ ಶಿವಾನಂದ ಅರ್ಜಿ**
ಕಾರ್ಯದರ್ಶಿ ಗ್ರಾಮ ಪಂಚಾಯತ ಅಂಚಟಗೇರಿ

## ಮನೆ ಮನೆಗೆ ಗಂಗೆ......





ಪ್ರತಿಯೊಬ್ಬ ವ್ಯಕ್ತಿಗೂ ಶುದ್ಧ ನೀರನ್ನು ಪಡೆಯುವುದು ಕೂಡ ಮೂಲಭೂತ ಹಕ್ಕಾಗಿದೆ. ಜಲ ಜೀವನ್ ಮಿಷನ್ ಯೋಜನೆಯಡಿ ಗ್ರಾಮ ಪಂಚಾಯತಿ ವ್ಯಾಪ್ತಿಯ 1183 ಕುಟುಂಬಗಳಿಗೆ, ಶಾಲೆ, ಅಂಗನವಾಡಿ ಮತ್ತು ಇತರೆ ಸರ್ಕಾರಿ ಕಛೇರಿಗಳಿಗೆ ಕಾರ್ಯಾತ್ಮಕ ನಲ್ಲಿಗಳು ಮತ್ತು ಅವುಗಳಿಗೆ ಮೀಟರ್ ಅಳವಡಿಸಲಾಗಿದೆ. ಇದರಿಂದ ನೀರಿನ ಸರಬರಾಜು, ಬಳಕೆ ಮತ್ತು ನೀರು ವ್ಯರ್ಥವಾಗುವುದನ್ನು ತಡೆಯಲು ಸಹಾಯಕವಾಗಿದೆ. ಎಲ್ಲರಿಗೂ ಶುದ್ಧ ನೀರಿನ ಸರಬರಾಜು ಆಗುವುದನ್ನು ಖಾತರಿ ಪಡಿಸಿಕೊಳ್ಳಲಾಗುತ್ತಿದೆ. ಸಾರ್ವಜನಿಕರಿಗೆ ಸುಗಮವಾಗಿ ನೀರು ಪೂರೈಸಲು ತಕ್ಷಣ ಮಾಹಿತಿ, ಸಂವಹನ ಮಾಡಲು ವಾಟರ್ ಮನ್‌ಗಳಿಗೆ ವಾಕಿ ಟಾಕಿ ನೀಡಲಾಗಿದೆ.

**ಶ್ರೀ ಗಂಗಾಧರ ಕಂದಕೂರ**
ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಹುಬ್ಬಳ್ಳಿ

## ದುಡಿಯುವ ಕೈಗಳಿಗೆ ಕೆಲಸ......



ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಅಮೃತ ಗ್ರಾಮ ಪಂಚಾಯತ ಯೋಜನೆಗಳಡಿ ಅಂಚಟಗೇರಿ ಗ್ರಾಮದ ಪ್ರೌಢಶಾಲಾ ಮಕ್ಕಳಿಗೆ ಆಟದ ಮೈದಾನ, ಶಾಲಾ ಕಂಪೌಂಡ ಹಾಗೂ ಅಗ್ರಹಾರ ತಿಮ್ಮಸಾಗರ ಗ್ರಾಮದ ಮಕ್ಕಳಿಗೆ ಆಟದ ಮೈದಾನ, ಸಾರ್ವಜನಿಕ ಉದ್ಯಾನವನ ನಿರ್ಮಾಣ ಮಾಡಲಾಗಿದೆ. ಇದು ಅಲ್ಲದೇ ವೈಯಕ್ತಿಕ ಕಾಮಗಾರಿಗಳಾದ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬದು ನಿಮಾಣ, ಇಂಗು ಗುಂಡಿಗಳ ನಿರ್ಮಾಣ, ದನದ ಕೊಟ್ಟಿಗೆಗಳು, ಅಂಗನವಾಡಿ ಕೇಂದ್ರಗಳಲ್ಲಿ ಕೈ ತೋಟ ನಿರ್ಮಾಣ, ಎರೆಹುಳು ತೊಟ್ಟಿಗಳನ್ನು ನಿರ್ಮಿಸಿಕೊಡಲಾಗಿದೆ. ಇದರಿಂದ ಜನರಿಗೆ ಸ್ಥಳಿಯವಾಗಿ ಕೆಲಸ ದೊರೆತಂತಾಗಿದೆ. ಹುಬ್ಬಳ್ಳಿ ತಾಲೂಕ ಮಟ್ಟದ ಪಂದ್ಯಾವಳಿಗಳು ಗ್ರಾಮದ ಮೈದಾನದಲ್ಲಿಯೇ ಏರ್ಪಡಿಸಲಾಗಿತ್ತು.

**ಶ್ರೀ ಸದಾನಂದ ಅಮರಾಪೂರ**
ಸಹಾಯಕ ನಿರ್ದೇಶಕರು(ಗ್ರಾ.ಉ), ತಾಲೂಕ ಪಂಚಾಯತ ಹುಬ್ಬಳ್ಳಿ

## ತ್ಯಾಜ್ಯಕ್ಕೆ ಸಂಜೀವಿನಿಯಾದ ಶ್ರೀಮತಿ ನೀಲಮ್ಮ...



ಶ್ರೀಮತಿ ನೀಲಮ್ಮ ಮತ್ತಿಹಳ್ಳಿ ಇವರು 2019-20ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿದ್ದರು. ಇವರು ಸಾಮಾಜಿಕ ಚಟುವಟಿಕೆಗಳಲ್ಲಿ ಕ್ರೀಯಾಶೀಲತೆಯುಳ್ಳ ಮಹಿಳೆಯಾಗಿದ್ದರಿಂದ ಪ್ರಪ್ರಥಮವಾಗಿ ಘನ ತ್ಯಾಜ್ಯ ನಿರ್ವಹಣೆ ಕ್ಷೇತ್ರ ಅಧ್ಯಯನಕ್ಕೆ ಕೊಪ್ಪಳ ಜಿಲ್ಲೆ ಹುಲಗಿ ಗ್ರಾಮ ಪಂಚಾಯತಿ ಹಾಗೂ ಮಹಾತ್ಮಗಾಂಧಿ ರಾಷ್ಟ್ರೀಯ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಬೆಂಗಳೂರು 05 ದಿನಗಳ ಕಾಲ ತರಬೇತಿ ಪಡೆದುಕೊಂಡರು. ತದನಂತರ ಗ್ರಾಮ ಪಂಚಾಯತ ಮಟ್ಟದ ಸಂಜೀವಿನಿ ಮಹಿಳಾ ಒಕ್ಕೂಟ ಸದಸ್ಯರಿಗೆ ತರಬೇತಿ ನೀಡಿ, ಘನ ತ್ಯಾಜ್ಯ ನಿರ್ವಹಣೆಗೆ ಸಿದ್ಧಪಡಿಸಿ. ಕೆಲಸ ಪ್ರಾರಂಭಿಸಿದರು. ಪ್ರಸ್ತುತ ಇತರೆ ಗ್ರಾಮ ಪಂಚಾಯತಿಗಳಿಗೆ ಮಾದರಿ ಗ್ರಾಮ ಪಂಚಾಯತಿಯನ್ನಾಗಿಸಲು ಶ್ರಮಿಸಿದರು. ನೀಲಮ್ಮರವರು ಘನ ತ್ಯಾಜ್ಯ ನಿರ್ವಹಣೆ ಕುರಿತಾಗಿ ವಿವಿಧ ಗ್ರಾಮ ಪಂಚಾಯತಿಗಳಿಗೆ ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿ ನೀಡುತ್ತಿದ್ದಾರೆ. ಇದು ಜಿಲ್ಲೆಗೆ ಮತ್ತು ಗ್ರಾಮ ಪಂಚಾಯತಿಗೆ ಹೆಮ್ಮೆಯ ವಿಷಯವಾಗಿದೆ.

**ಶ್ರೀಮತಿ ಪದ್ಮಾವತಿ ನಾಗನಗೌಡರ**
ಮಾಹಿತಿ ಶಿಕ್ಷಣ ಸಂವಹನ ಸಂಯೋಜಕರು ಜಿಲ್ಲಾ ಪಂಚಾಯತ, ಧಾರವಾಡ

## ನಮ್ಮ ಗ್ರಾಮ ಪ್ಲಾಸ್ಟಿಕ್ ಮುಕ್ತ ಗ್ರಾಮ....



ಹುಬ್ಬಳ್ಳಿ ನಗರದ ಸಮೀಪದಲ್ಲಿರುವ ಈ ಗ್ರಾಮ ಪಂಚಾಯತಿಯು ಕಸದ ಸಮಸ್ಯೆಯನ್ನು ಎದುರಿಸುತಿತ್ತು, ಅದರ ಪರಿಹಾರಕ್ಕಾಗಿ ಸ್ವಚ್ಛ ಸಂಕೀರ್ಣ ಘಟಕ ನಿರ್ಮಾಣ, ಮನೆಗಳಿಗೆ ಕಸದ ಬುಟ್ಟಿ ನೀಡಿ, ಟ್ರ್ಯಾಕ್ಟರ್ ಮೂಲಕ ಒಣ ಮತ್ತು ಹಸಿ ಕಸವನ್ನು ಸಂಗ್ರಹಿಸಿ, ಸ್ವ ಸಹಾಯ ಸಂಘದ ಮಹಿಳೆಯರ ಮೂಲಕ ವಿಂಗಡಿಸಿ, ವಿಲೇವಾರಿ ಮಾಡಲಾಗುತ್ತಿದೆ. ಗ್ರಾಮ ಪಂಚಾಯತ ಅಧ್ಯಕ್ಷರು, ಜನಪ್ರತಿನಿಧಿಗಳು, ಸಾರ್ವಜನಿಕರು ಮತ್ತು ಸಿಬ್ಬಂದಿಗಳ ಸಂಕಲ್ಪ ಮತ್ತು ಪರಿಶ್ರಮದಿಂದ ಇಂದು ಪ್ಲಾಸ್ಟಿಕ್ ಮುಕ್ತ ಗ್ರಾಮ ಪಂಚಾಯತ ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ. ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರು ಶಾಲಾ ಮಕ್ಕಳಿಗೆ ಪ್ಲಾಸ್ಟಿಕ್ ಬಾಟಲ್‌ಗಳನ್ನು ಸಂಗ್ರಹಿಸಿ ಗ್ರಾಮ ಪಂಚಾಯತಿಗೆ ನೀಡುವಂತೆ ಘೋಷಿಸಿ, ತಮಗೆ ಸರ್ಕಾರ ನೀಡುವ ಗೌರವ ಧನವನ್ನು ಪ್ರತಿ ಬಾಟಲ್‌ಗೆ ರೂಪಾಯಿ 1 ರಂತೆ ಪ್ಲಾಸ್ಟಿಕ್ ನೀಡಿದ ಮಕ್ಕಳಿಗೆ ಪ್ರೋತ್ಸಾಹ ಧನವಾಗಿ ನೀಡಿದರು. ಇದರಿಂದ ಪ್ಲಾಸ್ಟಿಕ್ ಸಂಗ್ರಹಣೆ ಹಾಗೂ ಪ್ಲಾಸ್ಟಿಕ್ ಮುಕ್ತಿಗೆ ಹೊಸ ರೂಪವನ್ನು ನೀಡುವುದರ ಮೂಲಕ ಮಕ್ಕಳ ಮತ್ತು ಸಾರ್ವಜನಿಕರ ಮನಃಪರಿವರ್ತಿಸಿ ಪ್ಲಾಸ್ಟಿಕ್ ಮುಕ್ತ ಗ್ರಾಮವನ್ನಾಗಿಸಲು ಶ್ರಮಿಸಿದರು.

ಬೂದು ನೀರನ್ನು ವೈಜ್ಞಾನಿಕವಾಗಿ ನಿರ್ವಹಿಸಲು ವೈಯಕ್ತಿಕ/ ಸಮುದಾಯ ಇಂಗು ಗುಂಡಿಗಳ ನಿರ್ಮಾಣ, ಪೌಷ್ಟಿಕ ಕೈತೋಟ ಹಾಗೂ ಇತರೆ ತಂತ್ರಜ್ಞಾನಗಳ ಮೂಲಕ ಬೂದು ನೀರು ನಿರ್ವಹಣೆಯನ್ನು ಮಾಡುವುದರೊಂದಿಗೆ ಅಂತರ್ಜಲ ಮಟ್ಟ ಹೆಚ್ಚಿಸುವುದು ಜಲ ಮೂಲಗಳ ಸಂರಕ್ಷಣೆಗೆ ಹೆಚ್ಚಿನ ಪ್ರಾದಾನ್ಯತೆ ನೀಡಲಾಗುತ್ತಿದೆ.

**ಶ್ರೀಮತಿ ಸಲ್ಮಾ ಅಕ್ಬರ ಅಲಿ ದಾದಪ್ಪನವರ**
ಉಪಾಧ್ಯಕ್ಷರು, ಗ್ರಾಮ ಪಂಚಾಯತಿ ಅಂಚಟಗೇರಿ

## ಗ್ರಾಮೀಣ ಬಡ ಮಹಿಳೆಯರಿಗೆ ವರದಾನವಾದ "ಸಂಜೀವಿನಿ"



ಅಂಚಟಗೇರಿ ಗ್ರಾಮ ಪಂಚಾಯತಿಯಲ್ಲಿ ಬಡ ಕುಟುಂಬದ ಮಹಿಳೆಯರು ಸೇರಿಕೊಂಡು ಸ್ವ-ಸಹಾಯ ಸಂಘಗಳ ಮೂಲಕ ಒಕ್ಕೂಟ ರಚಿಸಿಕೊಂಡಿರುತ್ತಾರೆ. ಒಕ್ಕೂಟದ ನಿಯಮಾವಳಿಗಳ ಪ್ರಕಾರ ತಮ್ಮದೇ ಆದ ಕಾರ್ಯಕಾರಿ ಸಮಿತಿಯ ಕಾರ್ಯಕಲಾಪಗಳನ್ನು ನಡೆಸುತ್ತಿದ್ದಾರೆ. ಈಗಾಗಲೇ ಸಂಜೀವಿನಿ ಯೋಜನೆಯಿಂದ ಒಕ್ಕೂಟಕ್ಕೆ ಸಮುದಾಯ ಬಂಡವಾಳ ನಿಧಿ ನೀಡಲಾಗಿದೆ. ಸದರಿ ಒಕ್ಕೂಟದ ಸದಸ್ಯತ್ವ ಪಡೆದ ಸ್ವ-ಸಹಾಯ ಸಂಘದ ಮಹಿಳೆಯರು ಸಮುದಾಯ ಬಂಡವಾಳ ನಿಧಿಯಿಂದ ಸಾಲ ಪಡೆದು ನರ್ಸರಿ, ಹೈನುಗಾರಿಕೆ, ಹೂವಿನ ಕೃಷಿ, ರೇಷ್ಮೆ ಕೃಷಿ ಕೈಗೊಂಡು ಆರ್ಥಿಕವಾಗಿ ಸಬಲರಾಗುತ್ತಿದ್ದಾರೆ ಹಾಗೂ ಸಾಮಾಜಿಕವಾಗಿ ಮುಖ್ಯವಾಹಿನಿಯತ್ತ ದಾಪುಗಾಲು ಹಾಕುತ್ತಿದ್ದಾರೆ. ಈ ಎಲ್ಲ ಯಶಸ್ವಿನ ಹಿಂದೆ ತರಬೇತಿ ಪಡೆದ ಕೃಷಿ ಸಖಿ ಮತ್ತು ಪಶು ಸಖಿ ರವರು ಮಾರ್ಗದರ್ಶಕರಂತೆ ಕಾರ್ಯನಿರ್ವಹಿಸುತ್ತಿರುವುದು ಮಹಿಳೆಯರಿಗೆ ಸಂತೋಷದ ಸಂಗತಿ. ಸದರಿ ಒಕ್ಕೂಟದ ವತಿಯಿಂದ ಪ್ರತಿ ತಿಂಗಳು ಮಾಸಿಕ ಸಂತೆ ಆಯೋಜಿಸಿ ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶ ಸಿಗುತ್ತಿದೆ. ಮಹಿಳೆಯರ ಅಭಿಪ್ರಾಯದಲ್ಲಿ ಸಂಜೀವಿನಿ ಯೋಜನೆ ವರದಾನದಂತೆ ಹೊರಹೊಮ್ಮುತ್ತಿದೆ.

**ಶ್ರೀಮತಿ ಲಕ್ಷ್ಮೀ ಶಿವಳ್ಳಿ**
ಗ್ರಾಮ ಪಂಚಾಯತಿ ಮಟ್ಟದ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷರು


ಮಾಸ ಪತ್ರಿಕೆಯ ಪ್ರಕಟಣೆ

## ಗ್ರಾಮ ಪಂಚಾಯತ ಅಂಚಟಗೇರಿ

www.gpanchatageri.com   https://youtu.be/OANqOhiNz84

Dharwad Zilla Panchayat   ZPDharwad